## ಟೆನ್ ಟೆನ್





ಹಳ್ಳಿಯ ಗೌಡನೊಬ್ಬ ತನ್ನ ಶ್ರೀಮಂತಿಕೆಯನ್ನು ತೋರಿಸಿಕೊಳ್ಳಲು ಹೊಸದಾಗಿ ಬಿಡುಗಡೆಯಾದ ಒಂದು ಪ್ರತಿಷ್ಠಿತ ಕಂಪನಿಯ ಕೈಗಡಿಯಾರವನ್ನು ಕೊಂಡು ಅದಕ್ಕೆ ಬಂಗಾರದ ಚೈನು ಹಾಕಿಸಿಕೊಂಡು, ಎಲ್ಲರಿಗೂ ಕಾಣುವಂತೆ ತನ್ನ ಎಡಗೈಯನ್ನೇ ಮುಂದೆ ಮಾಡುತ್ತಾ ನಡೆದಿದ್ದ. ಶಾಲಾ ಬಾಲಕನೊಬ್ಬ ಬೀದಿಯಲ್ಲಿ ಹೋಗುತ್ತಿರುವಾಗ ಈ ಗೌಡಪ್ಪ ಎದುರಿಗೆ ಬರುತ್ತಿದ್ದ. ಶಾಲಾ ಸಮಯವಾಗಿದ್ದರಿಂದ ಆ ಹುಡುಗ ಗೌಡಪ್ಪನನ್ನು, ‘ಅಜ್ಜಾ, ಟೈಂ ಎಷ್ಟಾಯ್ತು?’ ಎಂದು ಕೇಳಿದ. ಅವನು, ‘ತಮ್ಮಾ! ಇಂದೇ ಹೊಸ ವಾಚ್ ಕೊಂಡು ಬಂದಿದ್ದೀನಿ. ನೀನೇ ನೋಡಿ ನನಗೂ ಸಮಯ ಹೇಳು’ ಎಂದು ಎಡಗೈಯನ್ನು ಮುಂದೆ ಚಾಚಿದ. ಹುಡುಗ, ‘ಟೆನ್‌ಟೆನ್’ ಎಂದು ಹೇಳಿದ. ಆಗ ಆ ಗೌಡ, ‘ನನಗೆ ಕಿವಿ ಕೇಳ್ತಾವೆ ಕಣ್ಲಾ. ಒಂದೇ ಸಲ ಹೇಳಿದರೆ ಸಾಕು! ಎರಡು ಸಲ ಯಾಕ್ ಹೇಳ್ತೀಯಾ?’ ಎಂದ. ಹುಡುಗ ನಗುತ್ತಾ ಶಾಲೆಗೆ ಓಡಿದ.

**ಆರ್.ಡಿ. ಕುಲಕರ್ಣಿ**



## ವಯಸ್ಸು

ಹೆಂಡತಿ ಕನ್ನಡಿ ಮುಂದೆ ನಿಂತು ಅಲಂಕಾರ ಮಾಡಿಕೊಳ್ಳುತ್ತಾ ಗಂಡನಿಗೆ ಕೇಳಿದಳು, ‘ರೀ, ನಾನೀಗ ಎಷ್ಟು ವರ್ಷದವಳ ತರಹ ಕಾಣಿಸ್ತೀನಿ ಹೇಳಿ’. ಗಂಡ ಹೇಳಿದ, ‘ಕೂದಲು ನೋಡಿದರೆ 30, ಮೈಕಾಂತಿ ನೋಡಿದರೆ 25, ಮೈಮಾಟ ನೋಡಿದರೆ 20’. ಹೆಂಡತಿಗೆ ಖುಷಿಯೊ ಖುಷಿ. ನಾಚುತ್ತಾ, ‘ಹೋಗೀಪ್ಪಾ, ನೀವೊಂದು... ಸುಮ್ನೆ ಏನೇನೋ ಹೇಳ್ತೀರಾ...’ ಅಂದಳು. ಕೂಡಲೆ ಗಂಡ ಹೇಳಿದ, ‘ಇರು ಇರು, ಎಲ್ಲಾ ಟೋಟಲ್ ಮಾಡ್ಬೇಕು!’

**ವಿ. ಹೇಮಂತ ಕುಮಾರ್**

ಕಲೆ: ಗಣೇಶ ಆಚಾರ್ಯ